# ಕೊನೆಯ ತಾಸಿನ ವ್ಯವಸ್ಥೆಗಳು

## ಓದುವ ಮನೆಪಾಠ #35

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).
- H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).
  - 1. ಕಡೇಯ ಭೋಜನ (ಮುಂದುವರೆಯುವದು).
    - f. ಅಪೊಸ್ತಲರಿಗೆ ಎಚ್ಚರಿಕೆ ಹಾಗೂ ಉತ್ತೇಜನ (ಯೋಹಾನ 14:1-16:33).
    - g. ತಂದೆಯ ಚಿತ್ತ (ಯೋಹಾನ 17:1-26).

## ಪೀಠಿಕೆ

ನವೆಂಬರ್ 1977ರಲ್ಲಿ, ನನ್ನ ಕುಟುಂಬ ಮತ್ತು ನಾನು ಆಸ್ಟ್ರೇಲಿಯಾದ ಗ್ರೇಟರ್ ಸಿಡ್ನಿಯ ಸಭೆಯ ಜೊತೆ ಹತ್ತು ವರ್ಷ ಕೆಲಸ ಮಾಡಿದ ನಂತರ USಗೆ ಮರಳಲು ಸಿದ್ಧ ರಾಗುತ್ತಿದ್ದೆವು.[1] ಅದೊಂದು ಶ್ರಮದಾಯಕ ದಿನವಾಗಿತ್ತು; ನಾವು ಮಾಡುವದು ಬಹಳವಿತ್ತು, ಅನೇಕ ವ್ಯವಸ್ಥೆಗಳನ್ನು ಮಾಡುವುದಿಲ್ಲ! ಇದೊಂದು ಕಣ್ಣೀರಿನ ಸಮಯವಾಗಿತ್ತು: ಬರುವ ದಿನಗಳಲ್ಲಿ ಕುಟುಂಬಗಳ ಜೊತೆ ಮತ್ತು ಹಳೆಯ ಸ್ನೇಹಿತರ ಜೊತೆ ಮತ್ತೇ ಮತ್ತೇ ಸೇರುವದನ್ನು ಎದುರುನೋಡುವವರಾಗಿದ್ದೆವು, ಆದರೆ ಹೊಸ ಸ್ನೇಹಿತರನ್ನು ಅದು ನಮಗೆ ಬಹಳ ಹತ್ತಿರವಾದವರನ್ನು ಬಿಡುವುದಕ್ಕೆ ನಾವು ದುಃಖಿತರಾಗಿದ್ದೆವು. ಅದು ಕಾಳಜಿಪಡುವ ಸಮಯವಾಗಿತ್ತು; ಸಭೆಯಲ್ಲಿನ ಅನೇಕರು ಹೆಚ್ಚಾಗಿ ಹೊಸದಾಗಿ ಕ್ರೈಸ್ತರಾಗಿದ್ದರು, ಮತ್ತು ನಾವು ಅವರ ಆತ್ಮೀಕ ಸೌಖ್ಯತೆಯ ಬಗ್ಗೆ ಭಯವುಳ್ಳವರಾಗಿದ್ದೆವು ಆ ದಿನಗಳು ಬೋಧನೆಗಳಿಂದ, ಯೋಜನೆಗಳಿಂದ ಮತ್ತು ಪ್ರಾರ್ಥನೆಯಿಂದ ತುಂಬಿರುವವುಗಳು ಆಗಿದ್ದವು.

ಸಮಾನತೆಯು ಪರಿಪೂರ್ಣತೆಯಿಂದ ದೂರವಾಗಿದೆ, ಆದರೆ ನಮ್ಮ ಸ್ಥಿತಿಯು ತನ್ನ ಮರಣಕ್ಕೆ ಹತ್ತಿರವಾಗಿ ಎಳೆದಂತಿದ್ದ ಯೇಸು ಎದುರಿಸದಂತದ್ದಕ್ಕೆ ಸಮಾನವಾಗಿತ್ತು. ನಾವು ಅಧ್ಯಯನ ಮಾಡಲಿರುವ ಪರಿಚ್ಛೇದಗಳಲ್ಲಿ, ಆತನು ತನ್ನಶಿಷ್ಯರಿಗೆ ಆತನು ಹೋಗುವ ಸಮಯವು ಬಂದಿದೆ ಎಂದು ಒತ್ತಿ ಹೇಳಿದ್ದಾನೆ (ಯೋಹಾನ 14:2, 3, 12, 19, 28, 30; 16:7, 16, 28; 17:1, 13; ನೋಡಿರಿ 13:33). ಅಂದರೆ ಯೋಹಾನ 14-17 ಯೇಸು "ಕೊನೆಯ ಗಳಿಗೆಯ ವ್ಯವಸ್ಥೆಯನ್ನು ಮಾಡಿದನು" ಎಂಬುದನ್ನು ಒತ್ತಿ ಹೇಳು ವುದಾಗಿದೆ. ವೇದಭಾಗವು ಅಪೊಸ್ತಲರಿಗೆ "ದೊಡ್ಡ ಬೀಳ್ಕೊಡುಗೆಯ ಉಪದೇಶದೊಂದಿಗೆ" ಪ್ರಾರಂಭವಾಗುತ್ತದೆ (ಅಧ್ಯಾಯ 14-16) ಮತ್ತು ಕರ್ತನ ಭಿನ್ನಹದ ಪ್ರಾರ್ಥನೆಯೊಂದಿಗೆ ಸಮಾಪ್ತಿಯಾಗುತ್ತದೆ (ಅಧ್ಯಾಯ 17).

ಯೋಹಾನ 14-17ನ್ನು ಯಥೋಚಿತವಾಗಿ ಮುಗಿಸದಿರುವ ನನ್ನ ಅಸಾಮರ್ಥ್ಯಕ್ಕಾಗಿ ನಾನು ಒಪ್ಪಿಕೊಳ್ಳುತ್ತೇನೆ. ಇದು ಶ್ರೇಷ್ಟ ಭಾಗಗಳಿಂದ ತುಂಬಿದ ಯೋಹಾನನ ಸುವಾರ್ತೆಯಲ್ಲಿನ ಅತಿದೊಡ್ಡ ಭಾಗಗಳಲ್ಲಿ ಒಂದಾಗಿದೆ. ಈ ಅಧ್ಯಾಯಗಳನ್ನು "ಕ್ರೈಸ್ತ ನಂಬಿಕೆಯ ಶ್ರೀಮಂತ ಖಜಾನೆಗಳಲ್ಲಿ ಒಂದಾಗಿದೆ" ಎಂದು ಕರೆಯುತ್ತಾರೆ.[2] John F. Carter ರವರು ಇದನ್ನು "ಈ ಅಮೂಲ್ಯವಾದ ಉಚ್ಚರಣೆಗಳಲ್ಲಿ ... ಸುವಾರ್ತೆಯಲ್ಲಿ ಅಲ್ಲದೇ ಬೇರೆಲ್ಲೂ ಸಿಗದೆ ಇರುವ ಕರ್ತನಾದ ಯೇಸುವಿನ ಭಾವನಾತ್ಮಕ ಜೀವಿತದಲ್ಲಿನ ಸೂಕ್ಷ್ಮ ಪ್ರಜ್ಞೆಯನ್ನು ಪ್ರೀಯರಾದ

ಶಿಷ್ಯರು ನಮಗೆ ಕೊಡುವವರಾಗಿದ್ದಾರೆ” ಎಂದು ಹೇಳುತ್ತಾರೆ.[3] “ಆತನು ಪ್ರಾರಂಭಿಸಿದಂಥ ಕಾರ್ಯವನ್ನು ಪೂರ್ಣಗೊಳಿಸಲಿರುವ ಈ ಮನುಷ್ಯರನ್ನು ಬಿಟ್ಟು ಹೋಗುವಂಥ ನೋವಿನ ಭಾರವನ್ನು ಯೇಸು ಮಾತನಾಡಿದ ಪ್ರತಿಯೊಂದು ಪದವು ಪ್ರತಿಫಲಿಸುವುದಾಗಿದೆ” ಎಂದು F. LaGard Smith ಬರೆಯುತ್ತಾರೆ.[4]

ಈ ಶ್ರೇಷ್ಟ ಅಧ್ಯಾಯಗಳನ್ನು ನಿಮಗೆ ಪರಿಚಯಿಸಲು ಎಲ್ಲವನ್ನೂ ಒಂದೇ ಪಾಠದಲ್ಲಿ ನಾನು ಮಾಡಬಲ್ಲೆ. ಅವುಗಳ ಸತ್ಯದಿಂದ ನಿಮ್ಮ ಜೀವಿತದುದ್ದಕ್ಕೂ ಪ್ರತಿಫಲಿಸುತ್ತಾ ಮತ್ತು ಆಶೀರ್ವಾದ ಹೊಂದುತ್ತಾ ಇರುವ ಹಾಗೆ ನೀವು ಕಳೆಯಬಹುದಾಗಿದೆ. ಅದಕ್ಕಿಂತ ಹೆಚ್ಚಾಗಿ ವಚನದಿಂದ ವಚನವನ್ನು ಅಧ್ಯಯ ಮಾಡುವದಕ್ಕೆ ಪ್ರಯತ್ನಿಸುವದು ಅಥವಾ ಭಾಗದಿಂದ ಭಾಗಕ್ಕೆ ಪುನವಾರ್ತಿಸುವದೂ ಕೂಡಾ ಕೆಲ ವಿಷಯಗಳು ಒಳಗೊಂಡಿರುವದನ್ನು ನಾನು ಒತ್ತಿ ಹೇಳುವವನಾಗಿದ್ದಾನೆ. ನನ್ನ ವಿಚಾರ ಸರಣಿಯು ಪ್ರಯಾಣಕ್ಕೆ ಬೇಕಾದ ವ್ಯವಸ್ಥೆಯ ಮೇಲೆ ಸಿದ್ಧತೆಯನ್ನು ಮಾಡುವುದರ ಮೇಲೆ ಕೇಂದ್ರಿಕರಿಸುವುದಾಗಿದೆ. ನನ್ನ ಕುಟುಂಬವು ಆಸ್ಟ್ರೇಲಿಯಾವನ್ನು ಬಿಡುವುದನ್ನೂ ಮತ್ತು ಯೇಸು ಈ ಲೋಕವನ್ನು ಬಿಡುವುದನ್ನು ಸಮಾನ ವಾಗಿರಿಸಲು ನಾನು ಸೂಚಿಸುವವನಾಗಿದ್ದಾನೆ.

ಯೋಹಾನ 14-17ನ್ನು ನಾವು ಪರೀಕ್ಷಿಸುತ್ತಿದ್ದಂತೆಯೇ, ಯೇಸುವು ಪ್ರಥಮವಾಗಿ ಮತ್ತು ಪ್ರಧಾನವಾಗಿ ಅಪೊಸ್ತಲರನ್ನು ಉದ್ದೇಶಿಸಿ ಹೇಳುತ್ತಿದ್ದಾನೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಸಾಮಾನ್ಯ ಅನ್ವಯದ ಅನೇಕ ವಚನಗಳು ಕೊಡಲ್ಪಡಬಹುದು, ಆದರೆ ವಾಗ್ದಾನಗಳು ವಿಶೇಷವಾಗಿ ಈ ಜನರಿಗೆ ಮಾತ್ರ ಕೊಡಲ್ಪಟ್ಟಿದ್ದವು ಎಂದು ಪ್ರತಿಪಾದಿಸದಿರುವುದರ ಬಗ್ಗೆ ನಾವು ಕಾಳಜಿಯನ್ನು ತೆಗೆದುಕೊಳ್ಳಬೇಕು (ಉದಾಹರಣೆ 14:26).

## ಅನುಕಂಪದ ಪ್ರೋತ್ಸಾಹ

ಬಿಟ್ಟುಹೋಗುವದು ಪ್ರತಿಯೊಬ್ಬರಿಗೂ ಕಷ್ಟದಾಯಕವಾದದ್ದು ಆಗಿದೆ. ಕ್ರಿಸ್ತನು ತಾನು ಹೋಗಲಿರುವುದಾಗಿ ಹೇಳಿದಾಗ, ಶಿಷ್ಯರು ದುಖದಿಂದ ತುಂಬಿದವರಾದರು (ಯೋಹಾನ 16:6). ಆದ್ದರಿಂದ “ಶ್ರೇಷ್ಟ ಬೀಳ್ಕೊಡುಗೆ ಬೋಧನೆಯು” ಪ್ರೋತ್ಸಾಹದಾಯಕ ಮಾತುಗಳಿಂದ ಆರಂಭವಾಯಿತು: “ನಿಮ್ಮ ಹೃದಯವು ಕಳವಳಗೊಳ್ಳದಿರಲಿ” (14:1). ನಂತರ ಯೇಸು “ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವುದಿಲ್ಲ.[5] ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಹೆದರದಿರಲಿ” (14:27; ನೋಡಿರಿ 16:33) ಎಂದು ಹೇಳಿದನು. ಆ ಬೋಧನೆಯು ಸಮಾಧಾನ ಮತ್ತು ಬಲಗೊಳಿಸುವುದರಿಂದ ರೂಪಿತವಾದ ಮಾತುಗಳಿಂದ ತುಂಬಿತ್ತು. ಕರ್ತನು ತನ್ನ ಅಪೊಸ್ತಲರಿಗೆ ಪ್ರೀತಿಯ ಭರವಸವನ್ನು ಕೊಟ್ಟನು (15:9, 12) ಮತ್ತು ಅವರನ್ನು “ಸ್ನೇಹಿತರು” ಎಂದು ಕರೆದನು (15:15). ಈ ಸಮಯದಲ್ಲಿ ಅವರು ದುಃಖಪಟ್ಟರೂ ಕೂಡಾ ಅವರ ದುಃಖವು ಸಂತೋಷವಾಗಿ ಮಾರ್ಪಡುವದು ಎಂದು ಅವರಿಗೆ ವಾಗ್ದಾನಮಾಡಿದನು (16:20-22; ನೋಡಿರಿ 15:11).

ಯೇಸು ಈ ಪ್ರೊತ್ಸಾಹದಾಯಕ ಮಾತುಗಳನ್ನು ಮಾತನಾಡುತ್ತಿರುವಾಗ, ನಿಜವಾಗಿಯೂ ತನಗೆ ಜೀವದಿಂದಿರುವ ಕೇವಲ ಕೇಲವೇ ತಾಸುಗಳು ಮಾತ್ರ ಇವೆ ಎಂಬುದರ ಬಗ್ಗೆ ಆತನು ಎಚ್ಚರದಿಂದನು (ನೋಡಿರಿ 14:30; 16:20, 32; 17:1). ಅದಲ್ಲದೆ, ಆತನು ತನ್ನ ಅಪೊಸ್ತಲರು ಬಗ್ಗೆಯೂ ಕಾಳಜಿಯುಳ್ಳವನಾಗಿದ್ದನು. ಇತರರಿಗಾಗಿ ಕರ್ತನ ನಿಸ್ವಾರ್ಥತನ ಮತ್ತು ಕಾಳಜಿಯು ನನ್ನನ್ನು ಪ್ರಭಾವಿತಗೊಳಿಸುತ್ತವೆ.

## ಗಂಭೀರವಾದ ವಿವರಣೆ

ಹೊರಟು ಹೋಗುವುದರ ಬಗೆಗೆ ಉದ್ಘೋಷಣೆಯು ಮಾಡಲ್ಪಟ್ಟಾಗ, ಯಾವಾಗಲೂ

ಕೇಳಲ್ಪಡುವ ಪ್ರಶ್ನೆಯೆಂದರೆ, "ನೀವು ಯಾಕೆ ಹೋಗಬೇಕು?" ಎಂಬುದೇ. ನಮಗೆ ಈ ಪ್ರಶ್ನೆಯು ಕೇಳಲ್ಪಟ್ಟಾಗ ನಾವು ನಮ್ಮ ಕಾರಣವನ್ನು ಹಂಚಿಕೊಂಡೆವು. ನಮ್ಮ ಹೆಣ್ಣುಮಕ್ಕಳು ಯುನಿವರ್ಸಿಟಿಗೆ ಹೋಗುವ ವಯಸ್ಸನಿವರಿದ್ದರು, ಮತ್ತು ಅವರು ಕ್ರಿಶ್ಚಿಯನ್ ಸ್ಕೂಲನ್ನು ಸೇರಬೇಕೆಂದು ನಾವು ಬಯಸಿದ್ದೆವು; ನನ್ನ ಹೆಂಡತಿಯ ತಾಯಿ ತಮ್ಮ ಎಪ್ಪತ್ತನೆಯ ಇಳಿ ವಯಸ್ಸಿನಲ್ಲಿದ್ದರು, ಮತ್ತು ಅವರ ಉಳಿದ ಕೆಲವರ್ಷಗಳವರೆಗೆ ಅವ ಜೊತೆಯಲ್ಲಿರಬೇಕೆಂದು ನಾವು ಬಯಸಿದ್ದೆವು.[6]

ತನ್ನ ಹೊರಟು ಹೋಗುವಿಕೆಯು ಯಾಕೆ ಅವಶ್ಯವಾಗಿದೆ ಎಂದು ಕ್ರಿಸ್ತನೂ ಸಹ ತನ್ನ ಶಿಷ್ಯರಿಗೆ ಹೇಳಿದನು. ಮೊದಲ ಸ್ಥಳದಲ್ಲಿ, ಯೋಜನೆಯು ಯಾವಾಗಲೂ ಅದೇ ಇರುವುದಾಗಿತ್ತು. ನಂತರ ಆತನು ಭೂಮಿಗೆ ಬರುವವನಿದ್ದನು ತನ್ನ ತಂದೆಯ ಕಡೆಗೆ ಮರಳುವವನಿದ್ದನು (14:28; 16:5, 28). ಆ ಸಮಯದಲ್ಲಿ ತನ್ನ ಹಿಂದಿನ ಮಹಿಮೆಯನ್ನು ಆತನು ಪಡೆಯುವವನಿದ್ದನು (17:5); ಯೇಸು ತನ್ನ ಶಿಷ್ಯರಿಗೆ "ನೀವು ನನ್ನನ್ನು ಪ್ರೀತಿಸುವವರಾಗಿದ್ದೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷ ಪಡುವವರಾಗಿರುತ್ತೀದ್ದಿರಿ" (14:28) ಎಂದು ಹೇಳಿದನು.

ಹೇಗೋ, ಕ್ರಿಸ್ತನು ಮುಖ್ಯವಾಗಿ ತನ್ನಹೊರಟುಹೋಗುವಿಕೆಯು ಅಪೊಸ್ತಲರಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ಒತ್ತಿ ಹೇಳಿದನು. ಆತನು ಅವರಿಗೆ "ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತಿದ್ದೇನಲ್ಲಾ" ಎಂದು ಹೇಳಿದನು (ಯೋಹಾನ 14:2). ಮುಂದೆ ಆತನು ತಾನು ಭೂಮಿಯಲ್ಲಿದ್ದುಕೊಂಡು ಮಾಡುವುದಕ್ಕಿಂತಲೂ ತಂದೆಯ ಬಲಗಡೆಯಲ್ಲಿದ್ದುಕೊಂಡು ಹೆಚ್ಚಾದದ್ದನ್ನು ಮಾಡುವುದಾಗಿ ತನ್ನ ಶಿಷ್ಯರಿಗೆ ಸೂಚಿಸಿದನು ಆತನ ಹೆಸರಿನಲ್ಲಿ ಪ್ರಾರ್ಥಿಸುವುದರ ಬಗ್ಗೆ ಮಾತನಾಡುವದರ ಮೂಲಕ ಇದನ್ನು ಆತನು ಮಾಡಿದನು. ಅಲ್ಲಿಯವರೆಗೆ ಪ್ರಾರ್ಥನೆಯು ಯೇಸುವಿನ ಹೆಸರಿನಲ್ಲಿ ಮಾಡಲ್ಪಡುತ್ತಿರಲಿಲ್ಲ (ಯೋಹಾನ 16:24); ಆದರೆ ಆತನು ತನ್ನ ತಂದೆಯ ಬಳಿಗೆ ಮರಳಿದ ನಂತರ, ಆತನು ಅವರ ಮಧ್ಯವರ್ತಿಯಾದನು (1 ತಿಮೊಥೆ 2:5); ಆತನು ತನ್ನ ಹಿಂಬಾಲಕರಿಗಾಗಿ ಮಧ್ಯಸ್ಥಿಕೆದಾರನಾದನು (ರೋಮಾಪುರ 8:34; ಇಬ್ರಿಯ 7:25; 9:24; 1 ಯೋಹಾನ 2:1). ಭವಿಷ್ಯದಲ್ಲಿ, *ಆತನ ಹೆಸರಿನಲ್ಲಿ* ಅವರು ಏನನ್ನಾದರೂ ಕೇಳಿಕೊಂಡರೂ ಅದು ಅವರಿಗೆ ಸಿಕ್ಕುವದು ಎಂದು ವಾಗ್ದಾನಮಾಡಿದನು[7] (ಯೋಹಾನ 14:13, 14; 15:16; 16:23, 24).

ತಾನು ಯಾಕೆ ಹೊರಟು ಹೋಗುತ್ತೇನೆಂದು ಯೇಸು ವಿವರಿಸಿದಂತೆ ಆತನು ಹೊಟುಹೋದರೆ ಮಾತ್ರ ಪರಿಶುದ್ಧಾತ್ಮನು ಬರುವವನಾಗಿದ್ದನು ಎಂಬುದು ಆತನ ತತ್ವದ ವಿಚಾರವಾಗಿತ್ತು. "ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ ಕೇಳಿರಿ; ನಾನು ಹೋಗುವದು ನಿಮಗೆ ಹಿತವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ;[8] ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ" ಎಂದು ಹೇಳಿ ದನು (16:7). ಕೆಲವು ವಚನಗಳ ನಂತರ, ಕ್ರಿಸ್ತನು ಈ "ಸಹಾಯಕ"ನನ್ನು "ಆತ್ಮನು" ಎಂದು ಗುರುತಿಸಿದ್ದಾನೆ (16:13). ಮೂರು ವರ್ಷಗಳ ಹಿಂದೆ, ಸ್ನಾನಿಕನಾದ ಯೋಹಾನನು ತಾನು ನೀರಿನ್ಲಿ ಸ್ನಾನಮಾಡಿಸುವವನಾಗಿದ್ದನು ಆದರೆ ಮೆಸ್ಸೀಯನು ಪರಿಶುದ್ಧಾತ್ಮನಿಂದ ದೀಕ್ಷಾಸ್ನಾನಮಾಡಿಸುವನೆಂದು ಹೇಳಿದನು (ಮಾರ್ಕ 1:8). ಪರಿಶುದ್ಧಾತ್ಮನಲ್ಲಿ ದೀಕ್ಷಾಸ್ನಾನ ಎರಡು ತಿಂಗಳಿಗಿಂತಲೂ ಕಡಿಮೆಯ ದೂರದಲ್ಲಿತ್ತು (ಅಪೊಸ್ತಲರ ಕೃತ್ಯಗಳು 1:5, 8; 2:1-4, 33). ಆದ್ದರಿಂದ ಅವರು ಹೊಂದಲಿರುವ ಆತ್ಮನೊಂದಿಗಿನ ಹೊಸ ಸಂಬಂಧಕ್ಕೆ ಸಂಬಂಧಿಸಿದಂತೆ ಇರುವ ಮೂಲತಃ ವಿವರಣೆಗಳನ್ನು ತನ್ನ ಅಪೊಸ್ತಲರಿಗೆ ಕೊಡುವದು ಯೋಗ್ಯವೆಂದು ಯೇಸು ಯೋಚಿಸಿದನು. ಯೋಹಾನ 14-17ರಲ್ಲಿ ಪರಿಶುದ್ಧಾತ್ಮನಿಗೆ ಸಂಬಂಧಿಸಿದಂತಹ ಕಾರ್ಯಗಳಿಗಿಂತ ಹೆಚ್ಚಾಗಿ ಉಳಿದ ಸುವಾರ್ತೆಯ ವಿವರಗಳು ಒಟ್ಟಿಗೆ ಇಡಲ್ಪಟ್ಟಿವೆ.

ಈ ಪಾಠದಲ್ಲಿ ಆತ್ಮನನ್ನು ಕಳಿಸುವದು ಬೇರೆಯಾದ ವಿಭಾಗವಾಗುವುದಕ್ಕೆ ಯೋಗ್ಯವಾದದ್ದಾಗಿದೆ (ಮುಂದಿನ ಮುಖ್ಯ ಭಾಗವನ್ನು ನೋಡಿರಿ), ಆದರೆ 16:7ರಲ್ಲಿನ ಮಾತುಗಳನ್ನು ಒಂದು ಕ್ಷಣ ತಿರುಗಿ ಓದಿಕೊಳ್ಳುವಾ "ನಾನು ಹೋಗುವದು ನಿಮಗೆ ಹಿತವಾಗಿದೆ." ಇದು 14:12ರಲ್ಲಿನ ಕ್ರಿಸ್ತ ಗುರುತರವಾದ ವಾಗ್ದಾನವಾದ "... ನನ್ನನ್ನು ನಂಬುವವನು ನಾನು ನಡಿಸುವ ಕಾರ್ಯಗಳನ್ನೂ ತಾನೂ ನಡಿಸುವನು ಮತ್ತು ಅವಗಳಿಗಿಂತ *ಮಹತ್ತಾದ* ಕ್ರಿಯೆಗಳನ್ನು ನಡೆಸುವನು; ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ" (ಒತ್ತಿ ಹೇಳಿದ್ದು ನನ್ನದು) ಎಂಬುದು ಅದರ ಜೊತೆ ಸೇರಿಸುವುದಾಗಿದೆ. ಅಪೊಸ್ತಲರು ಯೇಸುವಿನ ಗೌಣಾತ್ಮಕವಾದ ಶ್ರೇಷ್ಟ (ಅದ್ಭುತ) ಕಾರ್ಯಗಳನ್ನು ಮಾಡಲಿಲ್ಲ,[9] ಆದರೆ ಅವರು ಸಂಖ್ಯಾತ್ಮ ವಾಗಿ ದೊಡ್ಡ ಕಾರ್ಯಗಳನ್ನು ಮಾಡಿದ್ದು (ನೋಡಿರಿ ಅಪೊಸ್ಲರ ಕೃತ್ಯಗಳ 5:12),[10] ಅವರು ಈ ಕಾರ್ಯಗಳನ್ನು ಆತ್ಮನ ಶಕ್ತಿಯಿಂದ ಮಾಡಿದರು (ನೋಡಿರಿ ಅಪೊಸ್ತಲರ ಕೃತ್ಯಗಳು 1:8; ರೋಮಾಪುರ 15:19), ಇದು ಸಾಧ್ಯಮಾಡಲೆಂದೇ ಕ್ರಿಸ್ತನ ತನ್ನ ಹೊರಟು ಹೋಗು ವಿಕೆಯನ್ನು ಒತ್ತಿ ಹೇಳಿದನು.

## ಸಮಾಧಾನವನ್ನು ಬಲಪಡಿಸುವದು

ನನ್ನಕುಟುಂಬ ಆಸ್ಟ್ರೇಲಿಯಾವನ್ನು ಬಿಡುವಾಗ, ನಮ್ಮ ಬದಲಿಯಾಗಿ ಮತ್ತು ಅವರ ಕಟುಂಬವು ಬೇಗನೇ ತಲುಪುವಿದೆಂದು ಸಭೆಗೆ ಪ್ರೋತ್ಸಾಹಿಸಲು ಸಮರ್ಥರಾದೆವು. ಇದೇ ರೀತಿಯಲ್ಲಿ ಯೇಸುವು ಅವರನ್ನು "ಅನಾಥರನ್ನಾಗಿ" ಬಿಟ್ಟು ಹೋಗುವುದಿಲ್ಲವೆಂದು ತನ್ನ ಶಿಷ್ಯರಿಗೆ ಆಶ್ವಾಸನೆಯನ್ನು ಕೊಟ್ಟನು (ಯೋಹಾನ 14:18), ಯಾಕೆಂದರೆ ಆತನು ತನ್ನ ಬದಲಿಯವನನ್ನು ಕಳಿಸುವವನಿದ್ದನು: ಆತನೇ ಪರಿಶುದ್ಧಾತ್ಮನು. "ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು" ಎಂದು ಹೇಳಿದನು (14:16). ಯೇಸು ಅವರಿಗೆ ಸಹಾಯಕನಾಗಿದ್ದನು; ಈಗ ಆತನು *ಇನ್ನೊಬ್ಬ* ಸಹಾಕನನ್ನು ಕಳಿಸುವವನಿದ್ದನು, ಆತನೇ ಆತ್ಮನು. ಕ್ರಿಸ್ತನು ಅವರೊಡನೆ ಮೂರುವರ್ಷಗಳಿಂದ ಅವರೊಡನೆ ಇದ್ದನು, ಆದರೆ ಹೊಸದಾದ ಸಹಾಕನು ಅವರೊಡನೆ "ಸದಾಕಾಲ" ಇರುವವನಾಗಿದ್ದನು.[11]

KJVಯು ಹೇಳುವಂತೆ ಪರಿಶುದ್ಧಾತ್ಮನು "ದೇವರ ಸಂತಾನದವರು" ಎಂದು ಕರೆಯಲ್ಪಡುವದರೆ ಭಾಗವಾಗಿದ್ದನು (ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 1:20; ಕೊಲಸ್ಸೆ 2:9).[12] "ತ್ರೈತ್ವ"[13] ಎಂದು ಕರೆಯಲ್ಪಡುವ ತದೆ, ಮಗ, ಪರಿಶುದ್ಧಾತ್ಮರಲ್ಲಿ ಆತನು ಒಬ್ಬನಾಗಿದ್ದಾನೆ (ಮತ್ತಾಯ 28:19). ಯೋಹಾನ 14:16ರಲ್ಲಿ ಪ್ರತಿಯೊಬ್ಬರೂ ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದಾರೆ: "ನಾನು [ಮಗನು] ತಂದೆಯನ್ನು [ಪಿತನು] ಕೇಳಿಕೊಳ್ಳುವೆನು; ಆತನು ನಿನಗೆ ಬೇರೊಬ್ಬ ಸಹಾಯಕನನ್ನು [ಪರಿಶುದ್ಧಾತ್ಮನು] ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು." ಅನೇಕರಿಗೆ ಪರಿಶುದ್ಧಾತ್ಮನು ದೇವರ ಸಂತಾನದಲ್ಲಿಯೇ ಬಲು ಗೂಢವಾದ ವ್ಯಕ್ತಿಯಾಗಿದ್ದಾನೆ. ತಂದೆಯು ತಾನೇ ಆತ್ಮವಾಗಿದ್ದಾನೆ (ಯೋಹಾನ 4:24), ಮತ್ತು ಆತನು ಪರಿಶುದ್ಧನಾಗಿದ್ದಾನೆ (1 ಪೇತ್ರ 1:15). ಆದ್ದರಿಂದ, ತಂದೆಯ ಬಗ್ಗೆ ನೀವು ಯಾವುದೇ ಪರಿಕಲ್ಪನೆಯನ್ನು ಹೊಂದಿದ್ದಾಗ್ಯೂ, ಆ ಅರಿತುಕೊಳ್ಳುವಿಕೆಯ ಪರಿಶುದ್ಧಾತ್ಮನಿಗೂ ಸಾಗುತ್ತದೆ ಮತ್ತು ನೀವು ತಪ್ಪಾದ ಮಾರ್ಗದಲ್ಲಿ ಹೋಗಬೇಕಾಗಿಲ್ಲ.

ದೇವರ ಸಂತಾನದಲ್ಲಿ ಮೂವರು ಸ್ವಭಾವದಲ್ಲಿ ಮತ್ತು ಶಕ್ತಿಯಲ್ಲಿ ಸಮಾನರಿದ್ದಾಗ, ಕಾರ್ಯದಲ್ಲಿಯೂ ಮತ್ತು ಜವಾಬ್ದಾರಿಕೆಯಲ್ಲಿಯೂ ಕೆಲ ವಿಭಿನ್ನತೆಗಳು ಅಲ್ಲ ಪ್ರತ್ಯಕ್ಷವಾಗಿವೆ. ಉದಾಹರಣೆಗೆ, ಪರಿಶುದ್ಧಾತ್ಮನು ವೇದವಾಕ್ಯದ ಪ್ರೇರಣೆಯಿಂದ ಸತ್ಯನಾಗುತ್ತಾನೆ (2 ಪೇತ್ರ 1:21; ನೋಡಿರಿ ಮಾರ್ಕ 12:36; ಅಪೊಸ್ತಲರ ಕೃತ್ಯಗಳು 1:16; 4:25). ಯೋಹಾನ 14-16 ಆದಿ ಸಭೆಯಲ್ಲಿ ಆತನ ಕಾರ್ಯದ ಒಳನೋಟದ ಬಗ್ಗೆ ನಮಗೆ ಕೊಡುವುದಾಗಿದೆ.

ಆ ಅಧ್ಯಾಯಗಳಲ್ಲಿನ ಮೂಲ ಪರಿಚ್ಛೇದಗಳ ಸಮೀಕ್ಷೆಯು ಈ ರೀತಿಯಲ್ಲಿವೆ.

*ಯೋಹಾನ 14:16, 17:* ಈಗಾಗಲೇ ನೋಡಿದಂತೆ, ಯೇಸು ತಾನು "ಇನ್ನೊಬ್ಬ ಸಹಾಯಕನನ್ನು" ಕಳುಹಿಸುವುದಾಗಿ ಅಪೊಸ್ತಲರಿಗೆ ಹೇಳಿದನು. "ಸಹಾಯಕನು" ಎಂಬ ಪದಕ್ಕೆ ಗ್ರೀಕ್ ಪದದ ಭಾಷಾಂತವು "paraklete" (*parakletos*)[14] ಆಗಿದ್ದು ಇದು "ಕರೆ" ಎಂಬ ಪದದ ನಾಮಪದದ ಜೊತೆ "ಜೊತೆಗಿರುವ" ಎಂಬ ಪದದ ಅರ್ಥವನ್ನು ಕೊಡುವುದಾಗಿದೆ ಸಹಾಯ ಮಾಡಲು ಅಥವಾ ನೆರವಾಗುವುದಕ್ಕಾಗಿ "ಜೊತೆಗಿರುವವನು ಎಂದು ಕರೆಯಲ್ಪಡುವವನು" ಎಂದು ಇದು ಸೂಚಿಸುವುದಾಗಿದೆ. "ಸಹಾಯಕ" (NASB, NKJV), "ಸಮಾಧಾನಪಡಿಸುವವ" (KJV), "ಸಲಹೆಗಾರ" (NIV, RSV), ಮತ್ತು "ಪ್ರತಿಪಾದಿಸುವವನು" (NRSV)[15] ಎಂದು ನಾನು ರೀತಿಯಲ್ಲಿ ಭಾಷಾಂತರವಾದ ಗ್ರೀಕ್ ಪದಗಳ ಅರ್ಥವನ್ನು ವ್ಯಕ್ತಪಡಿಸುವ ಯಾವುದೇ ಇಂಗ್ಲೀಷ್ ಪದವು ಇಲ್ಲ. ಕ್ರಿಸ್ತನು ಸಹಾಯಕ/ ಸಮಾಧಾನ ಪಡಿಸುವವನು/ಸಲಹೆಗಾರ/ಪ್ರತಿಪಾದಿಸುವನು ಎಂಬ ಈತನನ್ನು "ಸತ್ಯದ ಆತ್ಮನು" ಎಂದು ಗುರುತಿಸಿದ್ದಾನೆ. ಆತನು ಈ ರೀತಿಯಲ್ಲಿ ಆರಿಸಲ್ಪಟ್ಟಿದ್ದಾನೆ ಯಾಕೆಂದರೆ ಆತನು ಎಲ್ಲಾ ಸತ್ಯವನ್ನು ಪ್ರಕಟಿಸುವವನಾಗಿದ್ದಾನೆ ಮತ್ತು ಸತ್ಯವನ್ನೇ ಮಾತ್ರ ಮಾತನಾಡುವವನಾಗಿದ್ದಾನೆ (14:26; ನೋಡಿರಿ 17:17).

*ಯೋಹಾನ 14:17:* ಜಗತ್ತು (ಅದು ಕ್ರಿಸ್ತನನ್ನು ಸ್ವೀಕರಿಸುವುದಕ್ಕೆ ನಿರಾಕರಿಸುವ ಜಗತ್ತಿನ ಪದ್ಧತಿ) ನೋಡಲು, ತಿಳಿಯಲು, ಅಥವಾ ಆತ್ಮನನ್ನು ಸ್ವೀಕರಿಸಲು ಅರ್ಹವಾಗಿ ರುವುದಿಲ್ಲ. ಇನ್ನೊಂದೆಡೆಯಲ್ಲಿ, ಅಪೊಸ್ತಲರು ತಮ್ಮ ನಂಬಿಕೆಯಿಂದ ಮತ್ತು ಸತ್ಯತೆಯಿಂದ ಅರ್ಹರಾಗಿದ್ದಾರೆ. ಹಿಂದೆ, ಪರಿಶುದ್ಧಾತ್ಮನು ಅವರ ಜೊತೆಗೆ ಇದ್ದನು,[16] ಅದಕ್ಕಿಂತಲೂ ಮುಂಚೆ ಆತನು ಅವರಲ್ಲಿಯೇ ಇದ್ದನು.[17] ಆ ವಾಗ್ದಾನದ ಪರಿಪೂರ್ಣತೆಯು ಐವತ್ತು ದಿನಗಳ ನಂತರ ಯೆಹೂದಿ ಹಬ್ಬವಾದ ಪಂಚಾಶತ್ತಮ ಹಬ್ಬದಂದು ಬಂದಿತು (ಅಪೊಸ್ತಲರ ಕೃತ್ಯಗಳು 2:1-4, 33).

*ಯೋಹಾನ 14:26:* ಯೇಸು ಶಿಷ್ಯರಿಗೆ ಅನೇಕ ಸಂಗತಿಗಳನ್ನು ಕಲಿಸಿದನು, ಆದರೆ ಆತನು ಹೇಳಿದ್ದರಲ್ಲಿ ಹೆಚ್ಚಿನದನ್ನು ಶಿಷ್ಯರು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ ಎಂಬುದರ ಬಗ್ಗೆ ಆತನು ಅರಿವುಳ್ಳವನಾಗಿದ್ದನು. ಅವರಿಗೆ ಹೆಚ್ಚಿನ ಮಾಹಿತಿಯ ಅವಶ್ಯಕತೆಯು ಇತ್ತು; ಆದರೆ ಅವುಗಳಲ್ಲಿ ಕೆಲವನ್ನು ಹಂಚಿಕೊಳ್ಳಲು ಆತನಿಗೆ ಸಮಯವಿರಲಿಲ್ಲ (14:30), ಮತ್ತು ಕೆಲವನ್ನು ಸ್ವೀಕರಿಸಲು ಅವರು ಸಿದ್ಧರಿರಲಿಲ್ಲ (16:12). ಪರಿಶುದ್ಧಾತ್ಮನು ಬಂದಾಗ, ದೇವರು ಬಯಸುವ ಪ್ರತಿಯೊಂದನ್ನು ಅವರಿಗೆ ತಿಳಿಸುವುದಕ್ಕಾಗಿ ಆತನು ಅಪೊಸ್ತಲರಿಗೆ ಪ್ರಕಟಿಸುವವನಿದ್ದನು. ಈ ಪ್ರಕಟಪಡಿಸುವಿಕೆಯು ಕ್ರಿಸ್ತನು ಹಿಂದೆ ಅವರಿಗೆ ಕಲಿಸಿದ್ದನ್ನು ಅವರಿಗೆ ನೆನಪಿಸುವುದನ್ನು ಇದು ಒಳಗೊಂಡಿತ್ತು.

*ಯೋಹಾನ 15:26:* ಪರಿಶುದ್ಧಾತ್ಮನ ಕಾರ್ಯದ ಮುಖ್ಯ ವಿಶ್ವಾಸವು ಯೇಸುವಿಗೆ ಸಾಕ್ಷಿಯಾಗಿರುವುದಾಗಿತ್ತು (ನೋಡಿರಿ 16:14). ಸೂರ್ಯನು ಭೂಮಿಯನ್ನು ಕಳೆಗಟ್ಟಿಸುವ ಹಾಗೆ, ಆತ್ಮನ ಪ್ರಕಟಣೆಯ ಮೂಲ ಉದ್ದೇಶವು ಕ್ರಿಸ್ತನನ್ನು ಮತ್ತು ಸುವಾರ್ತೆಯನ್ನು ಸ್ತುತಿಸುವುದೇ ಆಗಿತ್ತು (ಮತ್ತು ಆಗಿದೆ) (ನೋಡಿರಿ 1 ಕೊರಿಂಥ 2:2; 15:1-4).[18]

*ಯೋಹಾನ 16:7-14:* ಪರಿಶುದ್ಧಾತ್ಮನು ಬಂದಾಗ, ಆತನು ಕೆಲವನ್ನು ಅಪನಂಬಿಕೆಯ ಜಗತ್ತಿಗೆ ಮತ್ತು ಕೆಲವನ್ನು ಅಪೊಸ್ತಲರಿಗಾಗಿ ಮಾಡಿದನು: (1) ಆತನು "ಪಾಪ ಮತ್ತು ನೀತಿವಂತಿಕೆಗಾಗಿ ಮತ್ತು ನ್ಯಾಯತೀರ್ಪಿಗಾಗಿ ಜಗತ್ತನ್ನು ದೋಷಿಯಂದು ಘೋಷಿಸಬಹುದು." ಪರಿಶುದ್ಧಾತ್ಮನು ಇಹಲೋಕದ ರಾಜಮಾರ್ಗಗಳ ಮತ್ತು ಬದಿಯ ಮಾರ್ಗಗಳ ಮೂಲಕ ಚಲಿಸುವ ಸೈತಾನನ ರೀತಿಯ "ಜಗತ್ತನ್ನು ಆರೋಪಿಸುವುದಿಲ್ಲ."[19] ಬದಲಾಗಿ, ಆತನು ಪ್ರೇರೇಪಿಸಿದ ವಾಕ್ಯದ ಮೂಲಕ ಪಾಪಗಳನ್ನು ಆತನು ದೂಷಿಸುವವನಾಗಿದ್ದಾನೆ (17:20). (2) ಆತನು ತಂದೆಯು ಏನನ್ನು ಹೇಳಿದನೋ ಅದನ್ನೇ ಮಾತ್ರ ಮಾತನಾಡುತ್ತಾ "ಎಲ್ಲಾ

ಸತ್ಯದಲ್ಲಿ" ಅಪೊಸ್ತಲರಿಗೆ ಮಾರ್ಗದರ್ಶನ ಮಾಡಿದನು.[20] "ಎಲ್ಲ ಸತ್ಯದಲ್ಲಿ" ಎಂಬುದು ಅಪೊಸ್ತಲರಿಗೆ ಬರೆಯಲ್ಪಟ್ಟಿರುವುದನ್ನು ಪ್ರಕಟಿಸುವುದಾಗಿದೆ[21] ಮತ್ತು ಆ ಸತ್ಯವನ್ನು ನಾವು ಹೊಸ ಒಡಂಬಡಿಕೆಯ ಪುಟದಲ್ಲಿ ಹೊಂದಿದ್ದೇವೆ. ದೇವರು ನಮಗೆ ಸಂಪೂರ್ಣವಾಗಿ ಪ್ರಕಟಿಸುವವನಾಗಿದ್ದಾನೆ; ಇದಕ್ಕೆ ಇನ್ನೊಂದು ಅನವಶ್ಯಕವಾಗಿದೆ (ನೋಡಿ ಯೂದ 3; 2 ಪೇತ್ರ 1:3; ಗಲಾತ್ಯ 1:6-9).

## ಭರವಸೆಯನ್ನು ತೃಪ್ತಿಗೊಳಿಸುವದು

ನಾವು ಆಸ್ಟ್ರೇಲಿಯಾವನ್ನು ಬಿಡುವಾಗ, ನಮ್ಮ ಬದಲಿಯಾಗಿ ಬರುವವರು ಬರುತ್ತಿದ್ದಾರೆ ಎಂದು ಅದಕ್ಕೆ ಜೊತೆಯಾಗಿ Macquarie ಸದಸ್ಯರಿಗೆ ಹೇಳುತ್ತಿದ್ದಂತೆಯೇ, ಈ ಜೀವಿತದಲ್ಲಿ ಆಗದಿದ್ದರೂ, ಮುಂದೆಯಾದರೂ ಅವರನ್ನು ನಾವು ತಿರುಗಿ ನೋಡುವುದಾಗಿ ಭರವಸೆಯನ್ನು ಕೊಟ್ಟೆವು. ಕೆಲವು ವರ್ಷಗಳ ನಂತರ, ನಾವು ಆಸ್ಟ್ರೇಲಿಯಾಕ್ಕೆ ತಿರುಗಿ ನಮ್ಮ ಮೊದಲ ಪ್ರಯಾಣವನ್ನು ಮಾಡಿದೆವು ಮತ್ತು ನಮ್ಮ ಅನೇಕ ಸ್ನೇಹಿತರೊಡನೆ ತಿರುಗಿ ಕೂಡಿ ಆನಂದಿಸಿದೆವು. ಯೇಸು ತನ್ನ ಶಿಷ್ಯರನ್ನು ಬಿಡುವ ತಯಾರಿ ನಡೆಸಿದಂತೆಯೇ, ತಾನು ಅವರೊಡನೆ ತಿರುಗಿ ಬರುವುದಾಗಿ ಅವರಿಗೆ ಆತನು ವಾಗ್ದಾನಮಾಡಿದನು (ನೋಡಿ ಉದಾಹರಣೆ ಯೋಹಾನ 14:3; 16:22). ಯೋಹಾನ 14-16ರಲ್ಲಿ, ಕ್ರಿಸ್ತನು ಕಡೆ ಪಕ್ಷ ಮೂರು ಕಡೆಗಳಲ್ಲಿ ತಾನು ಮರಳುವುದರ ಬಗ್ಗೆ ಮಾತನಾಡಿದ್ದಾನೆ:[22]

- ತನ್ನ ಪುನರುತ್ಥಾನದ ನಂತರ, ಆತನ ದಿವಾರೋಹಣದವರೆಗೆ ಆತನು ಸುಮಾರು ನಾಲ್ವತ್ತು ದಿನಗಳವರೆಗೆ ಅವರೊಡನೆ ಇದ್ದನು. ಈ ಸತ್ಯಾಂಶವು ಮೂಲತಃ 16:16-22ರಲ್ಲಿ ಒತ್ತಿ ಹೇಳಿದ್ದು ಕಂಡಬರುತ್ತದೆ.[23]
- ಆತನು ದಿವಾರೋಹಣದ ನಂತರ, ಆತನು ಶಿಷ್ಯರೊಂದಿಗೆ ಆತ್ಮೀಕವಾಗಿ ಇದ್ದನು (ಮತ್ತಾಯ 18:20; 28:20). ಯೇಸು ಇದನ್ನು ಆತ್ಮನ ಬರುವಿಕೆಯ ಜೊತೆ ಕೂಡಿಸಿದನು (ಯೋಹಾನ 14:18, 23). ಪರಿಶುದ್ಧಾತ್ಮನ ಇನ್ನೊಂದು ಹೆಸರಿ "ಕ್ರಿಸ್ತನ ಆತ್ಮವೇ" ಆಗಿದೆ (ರೋಮಾಪುರ 8:9; ಫಿಲಿಪ್ಪಿ 1:19; 1 ಪೇತ್ರ 1:11).
- ಕೆಲಸಾರಿ, ಆತನು ತನ್ನನ್ನು ತಾನು ಪ್ರತಿಪಾದಿಸಲು (ಎರಡನೆಯ ಬರೋಣದಲ್ಲಿ) ಮರಳುವವನಾಗಿದ್ದಾನೆ. ಯೋಹಾನ 14:3ರಲ್ಲಿನ ಈ ವಾಗ್ದಾನವು ಹೆಚ್ಚಾಗಿ ಯೇಸುವಿನ ಮನದಲ್ಲಿ ಇತ್ತು.

## ಗುರುತ್ವವಾದ ಮಾಹಿತಿ

ನಾವು ಆಸ್ಟ್ರೇಲಿಯಾದಿಂದ ಹೊರಡಲು ಸಿದ್ಧವಾಗುತ್ತಿದ್ದಂತೆಯೇ: "ನಾನು ಬಿಟ್ಟು ಹೊರಡುತ್ತಿರುವ ನನ್ನ ಸಹೋದರಿಯರಿಗೆ ಯಾವ ಸೂಚನೆಯನ್ನು ಕೊಡುವದು ನನಗೆ ಅವಶ್ಯವಿದೆ?" ಈ ಪ್ರಶ್ನೆಯನ್ನು ನಾವು ಪ್ರಾರ್ಥನಾ ಪೂರಕವಾಗಿ ಯೋಚಿಸಿದೆವು. ನಾನೇನು ಹೇಳಿದ್ದೇನೆಂದು ಯಾರ್ಯಾರು ನೆನಪಿನಲ್ಲಿಟ್ಟಿದ್ದಾರೆ ಎಂಬುದು ನನಗೆ ತಿಳಿಯದೆ, ಆದರೆ ಅರ್ಥಪೂರ್ಣ ಸಂದೇಶವನ್ನು ಕೊಡಲು ನಾನು ಪ್ರಯತ್ನಿಸಿದೆನು. ಯೇಸು ತನ್ನ ಮರಣದ ಮುನ್ನಿನ ಆ ರಾತ್ರಿಯಲ್ಲಿ ಅನೇಕ ಸತ್ಯಗಳನ್ನು ತನ್ನ ಶಿಷ್ಯರೊಡನೆ ಹಂಚಿಕೊಳ್ಳಲು ಬಯಸಿದ್ದನು. ಆತನು ಹೇಳಿದಂಥವುಗಳಲ್ಲಿ ಹೆಚ್ಚಿನವನ್ನು ಎರಡು ಶ್ರೇಣಿಗಳಲ್ಲಿ ಗುಂಪುಗಳನ್ನಾಗಿಸಲಾಗಿದೆ. ಇದಕ್ಕೆ ಪ್ರತಿಯೊಗಿ ಆತನು ಹೀಗೆ ಹೇಳಿದನು,

(1) *"ನನ್ನೊಡನೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳುವದು ನಿನಗೆ ಅವಶ್ಯವಿದೆ."* ಇದು ಯೋಹಾನ 15 ದ್ರಾಕ್ಷೇ ಬಳ್ಳಿ ಮತ್ತು ಅದರ ಕೊಂಬೆಗಳ ಉಪಮೆಯಿಂದ ಆರಂಭವಾಗುತ್ತದೆ.[24] ಕ್ರಿಸ್ತನು ತನ್ನ ಶಿಷ್ಯರಿಗೆ "ನಾನು ದ್ರಾಕ್ಷೇ ಬಳ್ಳಿ[25] ನೀವು ಕೊಂಬೆಗಳು;

ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು. ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" ಎಂದು ಹೇಳಿದನು (ವಚನ 5). ದ್ರಾಕ್ಷೇ ಬಳ್ಳಿಗೆ ಜೀವಕೊಡುವ ಪೋಷಕಾಂಶಗಳು ಹರಿಯುವದು ಕೊಂಬೆಗಳಲ್ಲಿಯೇ, ಹಾಗಾದರೆ ನನ್ನ ಆತ್ಮೀಕ ಜೀವಿತವು ಕರ್ತನಿಂದ ಬರುವುದಾಗಿದೆ. ಯೇಸುವಿನ ಮತುಗಳನ್ನು ನಿಮ್ಮ ಮನದಲ್ಲಿ ಇರಿಸಿಕೊಳ್ಳಿರಿ: "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ." ಕ್ರಿಸ್ತನನ್ನು ಬಿಟ್ಟು ನಾವು ಏನನ್ನು ಮಾಡಲಾಗದು; ಆತನನ್ನು ಬಿಟ್ಟು ನಾವು ಅಲ್ಪವಾದದ್ದನ್ನು ಕೂಡಾ ಮಾಡಲಾರೆವು; ಯೇಸುವನ್ನು ಬಿಟ್ಟು, ನಾವು ಏನನ್ನೂ ಮಾಡಲಾರೆವು. ನಾವು ಆತನಿಗೆ ಹತ್ತಿರವಾಗಿ ಇದ್ದೇವೆ ಎಂಬುದು ಅತ್ಯಗತ್ಯವಾಗಿದೆ. ಆತನ ಹಿಂಬಾಲಕರು ಎಷ್ಟು ಸುಲಭವಾಗಿ ಚದುರಿಹೋಗುತ್ತಾರೆ ಎಂಬುದನ್ನು ಕ್ರಿಸ್ತನು ಬಲ್ಲವನಾಗಿದ್ದನು (16:32; ನೋಡಿರಿ ಮತ್ತಾಯ 26:31). ಆತನಲ್ಲಿ ಮತ್ತು ಆತನ ಪ್ರೀತಿಯಲ್ಲಿ ನೆಲೆಯಾಗಿರುವಂತೆ ಅವರನ್ನು ಬೇಡಿಕೊಂಡನು (ಯೋಹಾನ 15:4-7, 9, 10). ನಮ್ಮ ವೇದಭಾಗದಲ್ಲಿ, ಆತನೊಡನೆಯ ಯೋಗ್ಯವಾದ ಸಂಬಂಧವನ್ನು ಕಾಪಾಡಿಕೊಳ್ಳಲು ಎರಡು ಪ್ರಾಯೋಗಿಕವಾದ ಸೂಚನೆಗಳನ್ನು ಆತನು ಕೊಟ್ಟಿದ್ದಾನೆ.

ನಾವು ನಮ್ಮ *ನಂಬಿಕೆಯಲ್ಲಿ ಬಲವನ್ನು* ಹೊಂದಬೇಕೆಂದು ಆತನು ಸೂಚಿಸುವನಾಗಿದ್ದಾನೆ. ಯೋಹಾನ 14 "... ದೇವರನ್ನೂ ನಂಬಿರಿ ನನ್ನನ್ನು ನಂಬಿರಿ" (ವಚನ 1) ನಂಬಿಕೆಯ ಮೇಲೆ ಒತ್ತಿ ಹೇಳುವುದರ ಜೊತೆ ಆರಂಭವಾಗುತ್ತದೆ.[26] ಸ್ವಲ್ಪಸಮಯದ ನಂತರ, ಯೇಸು "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ ನನ್ನ ಮೂಲಕವಾಗಿಯೇ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ" ಎಂದು ಹೇಳಿದನು (14:6). ನಂತರ ಆತನು "... ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎಂದು ಪ್ರತಿಪಾದಿಸಿದನು (14:9). ಈ ಶ್ರೇಷ್ಟ ಸತ್ಯವನ್ನು ನೀವು ನಂಬುತ್ತೀರಾ? ಕರ್ತನೊಡನೆ ಯೋಗ್ಯವಾದ ಸಂಬಂಧವನ್ನು ಕಾಪಾಡಿಕೊಳ್ಳಲು ನೀವು ಬಯಸುವುದಾದರೆ, ಬಲವಾದ ನಂಬಿಕೆಗೆ ಯಾವುದೇ ಬದಲಿಯಾದದ್ದು ಇಲ್ಲ.[27]

ಈ ಹಿಂಬಾಲಕರು ಆತನ ವಾಕ್ಯದ ಸಂಪತ್ತಾಗಿದ್ದಾರೆ ಎಂದು ಹೇಳಿದನು. ಕ್ರಿಸ್ತನಲ್ಲಿನ ನಂಬಿಕೆಯು *ಆತನ ವಾಕ್ಯದಿಂದ ಬೇರೆಯಾಗಿಸದು.* ನಂಬಿಕೆಯು ವಾಕ್ಯದಿಂದ ಬರುವುದಾಗಿದೆ (17:20; ನೋಡಿರಿ ರೋಮಾಪುರ 10:17). ಆತನ ವಾಕ್ಯವನ್ನು ಅರಿಯುವದನ್ನು ಮತ್ತು ಅದಕ್ಕೆ ವಿಧೇಯರಾಗುವುದರ ಮಹತ್ವವನ್ನು ಯೇಸು ಒತ್ತಿ ಹೇಳಿದ್ದಾನೆ. ಆತನು ತನ್ನ ಶಿಷ್ಯರಿಗೆ "ನೀವು ... ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು" ಎಂದು ಹೇಳಿದನು (15:7) ತಿರುಗಿ ಆತನು "ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು" ಎಂದು ಹೇಳಿದನು (14:23; ನೋಡಿ ಇದನ್ನು ಸಹ 14:15, 24; 15:10, 14). ತನ್ನ ಹಿಂಬಾಲಕರು ಏನು ಮಾಡಬೇಕೆಂಬ ನಿರ್ಧಿಷ್ಟ ಉದಾಹರಣೆಯನ್ನು ಆತನು ಕೊಟ್ಟನು. ಉದಾಹರಣೆಗೆ ನಾವು ಫಲದಾಯಕ ಜೀವಿತವನ್ನು ನಡೆಸಬೇಕು (15:8, 16).[28] ಮತ್ತು ನಮ್ಮ ನಂಬಿಕೆಯನ್ನು ಇತರರ ಜೊತೆ ಹಂಚಿಕೊಳ್ಳಬೇಕು.[29]

(2) *"ಇತರರೊಡನೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳುವದು ನಿನಗೆ ಅವಶ್ಯವಿದೆ."* ಕರ್ತನೊಡನೆ ಉತ್ತಮವಾದ ಸಂಬಂಧವನ್ನು ಕಾಪಾಡಿಕೊಳ್ಳಲು ಇತರರೊಡನೆ ಉತ್ತಮವಾದ ಸಂಬಂಧವನ್ನು ಸಹ ಕಾಪಾಡಿಕೊಳ್ಳಬೇಕು (ನೋಡಿ 1 ಯೋಹಾನ 4:20). ಅಪೊಸ್ತಲರು ವಿಚ್ಛಿದ್ರವಾದರು (ಲೂಕ 22:24); ಸೈತಾನ ದಾಳಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಅವರಿಗಿರುವ ಒಂದೇ ನಿರೀಕ್ಷೆಯು ಐಕ್ಯದಿಂದಿರುವುದೇ ಆಗಿತ್ತು (17:11; ನೋಡಿ ಇದನ್ನು ಸಹ 17:20-23).

ಐಕ್ಯತೆಯ ಮೂಲವು *ಪ್ರೀತಿಯಾಗಿದೆ.* ಯೇಸು ತನ್ನ ಅಂತಿಮ ಬೋಧನೆಯಲ್ಲಿ

ಹೆಚ್ಚಾಗಿ ಪ್ರೀತಿಯ ಬಗೆಗೆ ಹೇಳಿದನು: ದೇವರು ಆತನನ್ನು ಪ್ರೀತಿಸಿದನು (15:9), ಯೇಸು ಶಿಷ್ಯರನ್ನು ಪ್ರೀತಿಸಿದನು (14:31), ಮತ್ತು ಅವರು ಆತನನ್ನು ಪ್ರೀತಿಸಿದರು (15:9, 12). ಅವರೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿದರು (14:15, 21, 23, 28). ಆತನು ಅವರನ್ನು ಪ್ರೀತಿಸಿದ ಹಾಗೆ ಅವರೂ ಸಹ ಒಬ್ಬರನ್ನೊಬ್ಬರು ಪ್ರೀತಿಸಲು ಆತನು ಈಗಾಗಲೇ ಅವರಿಗೆ ಸವಾಲನ್ನು ಮಾಡಿದ್ದನು (13:34). ಈಗ ಆತನು "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೆ ನಾನು ಕೊಡುವ ಆಜ್ಞೆಯಾಗಿದೆ" ಎಂದು ಪುನರಾವರ್ತಿಸಿದನು (15:12; ನೋಡಿ ಇದನ್ನು ಸಹ 15:17). ಆತನು ಪ್ರೀತಿಸಿದ ಹಾಗೆ ಪ್ರೀತಿ ಸುವುದರ ಆತನ ಅರ್ಥದ ಯಾವುದೇ ತಪ್ಪು ತಿಳುವಳಿಕೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆತನು "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿ ಪ್ರೀತಿಯು ಯಾವುದು ಇಲ್ಲ" ಎಂಬುದನ್ನು ಆತನು ಸೇರಿಸಿದನು (15:13).[30] ಸ್ವಲ್ಪ ಸಮಯದಲ್ಲಿ ಆತನು ಕ್ರೂಜೆಯ ಮೇಲೆ ತನ್ನ ಜೀವಿತವನ್ನು ಅವರ ಮುಂದೆ ಮಲಗಿಸುವವನಿದ್ದನು.

## ಉದಾತ್ತವಾದ ಎಚ್ಚರಿಕೆಗಳು

ಆಸ್ಟ್ರೇಲಿಯಾದಿಂದ ನಮ್ಮ ಬಿಡುವಿಕೆಯ ಸಮಯವು ಹತ್ತಿರವಾದಂತೆ, ನಾವು ಬಿಟ್ಟು ಹೋದ ಮೇಲೆ ತಪ್ಪಾಗಬಹುದಾದ ಎಲ್ಲವನ್ನು ನಾನು ಯೋಚಿಸಲು ಪ್ರಯತ್ನಿಸಿದೆನು. ನಾನು ಭವಿಷ್ಯದಲ್ಲಿ ಮುಂದಾಗುವುದನ್ನು ಮುಂತಿಳಿಯೆನು, ಹೀಗೆ ಅನಿರೀಕ್ಷಿತ ಸಮಸ್ಯೆಗಳು ನಂತರದಲ್ಲಿ ಎಳಬಹುದಾಗಿದ್ದವು, ಆದರೆ ನಾನು ಕೊನೆಪಕ್ಷ ಸಭೆಯನ್ನು ಸಿದ್ಧಪಡಿಸಲು ಪ್ರಯತ್ನಿಸಿದೆನು. ಯೇಸು ಭವಿಷ್ಯವನ್ನು ಮುಂತಿಳಿದವನಾಗಿದ್ದನು. ಹೀಗಾಗಿ ಆತನು ತನ್ನ ಶಿಷ್ಯರಿಗೆ ಯುಕ್ತವಾದ ಎಚ್ಚರಿಕೆಗಳನ್ನು ಕೊಡಲು ಸಮರ್ಥನಾದನು ಆತನ ಹಿಂಬಾಲಿಕರಿಗಾಗಿ ಕಾಯುತ್ತಿದ್ದ ತೊಂದರೆಗಾಗಿ ಆತನು ವಿಶೇಷ ಲಕ್ಷವನ್ನು ಕೊಟ್ಟನು. ಈ ವಿಷಯದಲ್ಲಿ, ದ್ವೇಷದ ಜಗತ್ತು ಆತನ ಮೇಲೆ ಕೇಂದ್ರೀಕರಿಸಲ್ಪಟ್ಟಿತು (15:18, 24); ಆದರೆ ಆತನು ಹೊರಟ ನಂತರ, ದ್ವೇಷಿಸುವವರು ಅವರೆಡೆಗೆ ಸ್ಥಾನಾಂತರ ಹೊಂದಿದರು (15:20; ನೋಡಿರಿ 17:14-18). "ಅವರು ನಿಮ್ಮನ್ನು [ಸಭಾಮಂದಿರದಿಂದ] ಬಹಿಷ್ಕಾರ ಹಾಕಿದರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಿಸುವ ಕಾಲ ಬರುತ್ತದೆ" ಎಂದು ಅಪೊಸ್ತಲರನ್ನು ಎಚ್ಚರಿಸಿದು[31] (16:2). ಕಷ್ಟಗಳು ಬಂದಾಗ ಆತನು ಮುಂತಿಳಿಸಿದ ಎಲ್ಲವೂ ಅವರನ್ನು "ಮುಗ್ಗರಿಸುವದರಿಂದ" ತಡೆಯಿತು (16:1 ನೋಡಿ ವಚನ 4). ಆತನು "ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ. ನಾನು ಲೋಕವನ್ನು ಜಯಿಸಿದ್ದೇನೆ" ಎಂಬ ಮಾತುಗಳನ್ನು ಸೇರಿಸಿದನು (16:33).

## ಸ್ವಾರ್ಥರಹಿತ ಮಧ್ಯಸ್ಥಿಕೆ

ಆಸ್ಟ್ರೇಲಿಯಾದಲ್ಲಿನ ನಮ್ಮ ಅಂತಿಮ ತಾಸುಗಳು, ದೇವರು ನಮ್ಮ ಸಹೋದರ ಮತ್ತು ಸಹೋದರಿಯರ ಜೊತೆ ಇರಲಿ ಎಂದು ನಾವು ಉತ್ಸಾಹದಿಂದ ಪ್ರಾರ್ಥಿಸಿದೆವು. "ನಾವು ತಿರುಗಿ ಭೇಟಿಯಾಗುವ ತನಕ ದೇವರು ನಿಮ್ಮೊಂದಿಗಿರಲಿ" ಎಂದು ನಾವು ಹಾಡುವಾಗ ನನ್ನ ಹೆಂಡತಿಯ ಕಣ್ಣಿಂದ ನೀರು ಹರಿಯಲಾರಂಭಿಸಿತು.[32] ಯೋಹಾನ 17ರಲ್ಲಿರುವಂತೆ ಯೇಸು ಸಾಗುತ್ತಾ ಶಿಷ್ಯರೊಂದಿಗೆ ತನ್ನ ಅವಧಿಯನ್ನು ಮುಗಿಸಿದನು. Robert Culver ರವರು ಈ ಪ್ರಾರ್ಥನೆಯನ್ನು "ಬಲು ಸೂಚಿತವಾದ ಮಾನವನ ಪೂರ್ವದ ಕಥೆಯಲ್ಲಿನ ಪರಲೋಕದ ಜೊತೆಗಿನ ಲೋಕದ ವ್ಯವಹಾರ" ಎಂದು ಕರೆಯುತ್ತಾನೆ.[33] "ಯೋಹಾನ 17 … ಸುವಾರ್ತೆಯ ದಾಖಲಿಸಿದ 'ಪರಿಶುದ್ಧತ್ವದ ಪರಿಶುದ್ಧತೆ' ಆಗಿದೆ … ದೇವರಾದ ಮಗನು ಪಾಪಿಗಳಿಗೋಸ್ಕರ ಬಿಡುಗಡೆಗಾಗಿ ತಾನು ಕೊಡಲಿರುವ ತನ್ನ ಜೀವಿತದ ಮೂಲಕ ತನ್ನ ತಂದೆಯನ್ನು ಪರಿವರ್ತಿಸಬಲ್ಲನು ಎಂಬುದನ್ನು ಕೇಳುವ ಅವಕಾಶವನ್ನು ನಾವು

ಹೊಂದಿದ್ದೇವೆ" ಎಂದು Warren Wiersbe ಬರೆದಿದ್ದಾರೆ![34]

ಯೋಹಾನ 17ರಲ್ಲಿ, ಸುವಾರ್ತೆಯಲ್ಲಿನ ಪ್ರಾರ್ಥನೆಯು ಮೂರು ಭಾಗಗಳನ್ನು ಹೊಂದಿದೆ. ಮೊದಲನೆಯದು, ಯೇಸು ತನ್ನ ತಂದೆಯೊಡನೆಯ ತನ್ನ ಸಂಬಂಧದ ಬಗ್ಗೆ ಪ್ರಾರ್ಥಿಸಿದನು (ವಚನಗಳು 1-5). ಆತನು ತನಗೋಸ್ಕರ ಕೇಳಿದ ಒಂದೇ ಒಂದು ಸಂಗತಿ ಎಂದರೆ ತಾನು ಮಹಿಮೆಪಡಿಸಲ್ಪಡಬೇಕು ಎಂಬುದೇ (ವಚನಗಳು 1, 5; ನೋಡಿ ವಚನ 24; 12:23, 24, 27, 28). ಎರಡನೆಯದು, ಕ್ರಿಸ್ತನು ಅಪೊಸ್ತಲರಿಗಾಗಿ ಪ್ರಾರ್ಥಿಸಿದನು (17:6-19; ನೋಡಿ ವಚನಗಳು 24-26). ಅವರನ್ನು ರಕ್ಷಿಸಲು (ವಚನಗಳು 11, 15), ಅವರನ್ನು ಶುದ್ಧಗೊಳಿಸಲು (ವಚನ 19), ದೇವರಿಗೆ ಕೇಳಿಕೊಂಡನು. ಅಂತಿಮವಾಗಿ, ಯೇಸು ಅಪೊಸ್ತಲರ ವಾಕ್ಯದ ಮೂಲಕ ಆತನಲ್ಲಿ ನಂಬಿಕೆಯನ್ನು ಇಟ್ಟವರಿಗೋಸ್ಕರ ಪ್ರಾರ್ಥಿಸಿದನು (ವಚನಗಳು 20-23). ಇನ್ನೊಂದು ಮಾತಿನಲ್ಲಿ ಆತನು ನಿನಗಾಗಿ ಮತ್ತು ನನಗಾಗಿ ಪ್ರಾರ್ಥಿಸಿದನು. ಎಂಥಾ ಅದ್ಭುತವಾದ ವಿಚಾರ! ಆ ವಿಶ್ವಾಸಿಗಳು "ಒಂದು ಆಗುವ ಮೂಲಕ" ಜಗತ್ತು ಆತನನ್ನು ಸ್ವೀಕರಿಸಬಹುದೆಂದು ಆತನು ಪ್ರಾರ್ಥಿಸಿದನು (ವಚನಗಳು 21, 23). ಜಾಗತಿಕ ಸಾರ್ವತ್ರಿಕತೆಗೆ ಅಲ್ಲಿ ಯಾವುದೇ ಗಂಭೀರವಾದ ಬಿಕ್ಕಟ್ಟು ಇರಲಿಲ್ಲ ವೆಂಬುದಕ್ಕಿಂತ ಕ್ರಿಸ್ತನ ಮೇಲೆ ಆರೋಪಹೊರಿಸುತ್ತಿರುವವರ ರಾಜ್ಯವು ವಿಭಾಗವಾಯಿತು ಎಂಬುದೇ.

## ಮುಕ್ತಾಯ

"ಕೊನೆಯ ಕ್ಷಣದ ವ್ಯವಸ್ಥೆಯ" ಸಂಗತಿಯಲ್ಲಿ ಯೇಸುವಿನ ಇತರ ಸಂಗತಿಗಳು ಸೂಚಿತವಾಗಿರಬಹುದು. ಉದಾಹರಣೆಗೆ, ನನ್ನ ಕುಟುಂಬವು ಆಸ್ಟ್ರೇಲಿಯಾವನ್ನು ಬಿಡಲು ಸಿದ್ಧವಾಗುತ್ತಿದ್ದಂತೆಯೇ, ನಾವು ಛಾಯ ಚಿತ್ರಗಳನ್ನು ಮತ್ತು ನಮ್ಮ ಸ್ನೇಹಿತರೊಡನೆಯ ಕೆಲ ನೆನಪಿನ ಕಾಣಿಕೆಗಳನ್ನು ಹಂಚಿಕೊಂಡೆವು ಅದರ ಮೂಲಕ ನಾವು ಒಬ್ಬರನ್ನೊಬ್ಬರು ಮರೆಯುವುದಿಲ್ಲ ಎಂದರು. ಕರ್ತನ ಭೋಜನವನ್ನು ಸಂಸ್ಥಾಪಿಸುವ ಮೂಲಕ ಯೇಸು ಅದಕ್ಕೆ ಸಮಾನವಾದದ್ದನ್ನೇ ಮಾಡಿದನು (ಲೂಕ 22:19; 1 ಕೊರಿಂಥ 11:24, 25).

ಟಿಪ್ಪಣೆಗಳು

[1]ಈ ದೃಷ್ಟಾಂತವನ್ನು ನೀವು ವೈಯಕ್ತಿಕವಾಗಿ ತೆಗೆದುಕೊಳ್ಳಬಹುದು. ನೀವು ಹೊರಡುವ ಮುನ್ನ ಮಾಡುವ ವ್ಯವಸ್ಥೆಗಳ ಬಗ್ಗೆ ನೀವು ಯೋಚಿಸಬಹುದು. ಇನ್ನೊಂದು ಸಾಧ್ಯತೆಯೆಂದರೆ ಒಂದು ಮುಖ್ಯ ಹೊರಡುವಿಕೆಗಾಗಿ ನೀವು ಸಾಮಾನ್ಯವಾಗಿ ಮಾಡಬಹುದಾದ ವ್ಯವಸ್ಥೆಗಳನ್ನು ವಿವರಿಸಬಹುದು. [2]H. I. Hester, *The Heart of the New Testament* (Liberty, Mo.: Quality Press, 1963), 199. [3]John Franklin Carter, *A Layman's Harmony of the Gospels* (Nashville: Broadman Press, 1961), 292. [4]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1462. [5]"ಸಮಾಧಾನ" ಈ ಪದವು ಯೋಗ್ಯವಾದ ಪರಿಸ್ಥಿತಿಯ ಮೇಲೆ ಆತುಕೊಂಡಿರುತ್ತದೆ ಮತ್ತು ಆದಕಾರಣ ಅದು ತಾತ್ಕಾಲಿಕವಾಗಿ ರುತ್ತದೆ. ಯೇಸು ಯೋಗ್ಯವಾದ ಪರಿಸ್ಥಿತಿಗಳ ಮೇಲೆ ಆತುಕೊಂಡಿರಲಿಲ್ಲ ಅದು ಒಳಗಿಂದ ಬಂದಿತ್ತು ಮತ್ತು ಆದಕಾರಣ ಅದು ಸೈರಿಸುವಂಥದ್ದಾಗಿತ್ತು. [6]ನಿಜವಾಗಿಯೂ ಆಕೆಯು 99ರವೆಗೆ ಜೀವಿಸಿದ್ದಳು. [7]ಈ ವಾಗ್ದಾನವು ದೇವರು ಆಶೀರ್ವದಿಸುವ ರೀತಿಯ ಜೀವಿತದ ಮೇಲೆ ಜೀವಿಸುವ (1 ಯೋಹಾನ 3:22) ಮತ್ತು "ಆತನ ಚಿತ್ತದ ಪ್ರಕಾರ" ಕೇಳುವುದಕ್ಕೆ ಶರತ್ತು ಬದ್ಧವಾಗಿದೆ (1 ಯೋಹಾನ 5:14). "ಯೇಸುವಿನ ಹೆಸರಿನ" ಮೇಲೆ ಪ್ರಾರ್ಥಿಸುವದನ್ನು ಒತ್ತಿ ಹೇಳುವದು. ಹೊಸಒಂಡಬಡಿಕೆಯ ಮೂಲಕ ಮುಂದುವರೆದಿದೆ (ನೋಡಿರಿ ಎಫೆಸ 5:20; ಕೊಲಸ್ಸೆ 3:17). ಇದರ ಅರ್ಥ ಕೇವಲ ಪ್ರಾರ್ಥನೆಯ ಕೊನೆಯಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಕೇವಲ "ಯೇಸುವಿನ ಹೆಸರಿನಲ್ಲಿ" ಎಂದು ಅಂತ್ಯಗೂಳಿಸಬೇಕು ಎಂದು ನಾವು ಅರ್ಥಮಾಡಿಕೊಳ್ಳಬೇಕು ಎಂಬುದು ಇದರ ಅರ್ಥವಾಗಿದೆ. ಅದಲ್ಲದೆ, ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವದು ಕ್ರಿಸ್ತನು ಯಾರು, ಆತನು ಎಲ್ಲಿದ್ದಾನೆ ಆತನು ನಮಗಾಗಿ ಏನು ಮಾಡಬಲ್ಲನು ಎಂದು ಗುರುತಿಸುವುದನ್ನು ಒಳಗೊಂಡಿದೆ. ಇದು ನಮ್ಮ ನಂಬಿಕೆಗಳಿಗೆ ಮಧ್ಯವರ್ತಿಯಾದವನ ಮೇಲೆ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವದು ಮತ್ತು ಆತುಕೊಳ್ಳುವದು ಆಗಿದೆ. [8]ಪರಿಶುದ್ದಾನು ಬರಲಿರುವಾಗ ಯೇಸು ಯಾಕೆ ಹೋದನು ಎಂಬುದನ್ನು ಆತನು ನಮಗೆ ವಿವರಿಸಿಲ್ಲ. ಹಿಂದೆ ಯೋಹಾನನ ಸುವಾರ್ತೆಯಲ್ಲಿ, ಅಪೊಸ್ತಲನು "ಆತನು ಇನ್ನೂ ಮಹಿಮೆಪದವಿಯನ್ನು ಹೊಂದಿದೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಲ್ಲ" (ಯೋಹಾನ 7:39). ಆತ್ಮನು ಕೊಡಲ್ಪಡುವ ತನಕ ಕೆಲ ಕಾರಣಕ್ಕೋಸ್ಕರ, ಯೇಸು ಮರಣಸಲಿಲ್ಲ, ಏಳಲಿಲ್ಲ ಮತ್ತು ದೇವರೆಡೆಗೆ ದಿವಾರೋಹಣವಾಗಲಿಲ್ಲ. ಆತನ ಮರಣ ಹೂಣುವಕೆ, ಮತ್ತು ಪುನರುತ್ಥಾನದ ಕ್ರಿಸ್ತ ಸಂಪೂರ್ಣ. ಸುವಾರ್ತೆಯು ಪ್ರಕಟವಾಗುವತನಕ ಆತ್ಮನು ಬರಲಿಲ್ಲ ಎಂಬುದು ಬಹುಶಃ ಈ ಸೂಚನೆಯು ಆಗಿರಬಹುದು (ಸುವಾರ್ತೆ ಕೇಂದ್ರೀಕ ಅಂಶಗಳು; 1ಕೊರಿಥ 15:1-4). [9]"ಆಳು ಒಡಯನಗಿಂತ ದೊಡ್ಡವನಲ್ಲ" (ಯೋಹಾನ 13:16). [10]ಸುವಾರ್ತೆಯನ್ನು ಬೋಧಿಸುವದು ಮತ್ತು ಸಾವಿರಾರು ಜನರನ್ನು ಪರಿವರ್ತಿಸುವದು "ಶ್ರೇಷ್ಟ ಕಾರ್ಯ" ಎಂಬುದ ಅನೇಕ ಲೇಖಕರು ನಂಬುವವರಾಗಿದ್ದಾರೆ. ಒಂದು ಸಂಧರ್ಭದಲ್ಲಿ, ವಾಕ್ಯದ ಬಲು ಸ್ವಾಭಾವಿಕವಾದ ಅರ್ಥವು "ಕಾರ್ಯಗಳು" "ಅಧ್ಭುತಕಾರ್ಯಗಳು ಆಗಿವೆ" ಆದರೆ ಯೇಸು ಈ ಪದಗಳೊಂದಿಗೆ ಆಟವಾಡತ್ತಾ "ಶ್ರೇಷ್ಟ [ಇನ್ನೂ ಮುಖ್ಯವಾದದ್ದು] ಕಾರ್ಯವಾಗುತ್ತದೆ.

[11]ಪರಿಶುದ್ದಾತ್ಮನು ಅಪೋಸ್ತಲರ ಜೊತೆ ಉಳಿದ ದಿನಗಳಲ್ಲಿ ಇದ್ದನು ಮತ್ತು ಆತನು ಲೋಕದ ಅಂತ್ಯದವರೆಗೂ ಕ್ರೈಸ್ತರೊಡನೆ ಇರುವವನಾಗಿದ್ದಾನೆ. [12]"ದೇವರ ಸಂತಾನ" ಎಂಬುದರ ಗ್ರೀಕಪದದ ಭಾಷಾಂತರವು ದೇವರಲ್ಲಿರುವ ಗುಣಗಳನ್ನು ಹೊಂದಿರುವದು ಅಥವಾ ಹೇಳುವುದನ್ನು, ಸೂಚಿಸುತ್ತದೆ. NASBಯು "ದಿವ್ಯ ಸ್ವಭಾವ" "ಅಥವಾ ದಿವ್ಯತೆ" ಎಂದು ಭಾಷಾಂತರಿಸಿದೆ. [13]"ತ್ರಿತ್ವ" ಎಂಬುದು ಲ್ಯಾಟಿನ್ ಪದವಾಗಿದ್ದು "ಮೂವರು ಒಬ್ಬರಲ್ಲಿ"ಎಂಬ ಅರ್ಥವನ್ನು ಕೊಡುವುದಾಗಿದೆ. ತಂದೆ ಮಗ ಮತ್ತು ಪರಿಶುದ್ಧಾತ್ಮರನ್ನು ಬಗ್ಗೆ ಮಾತನಾಡುವುದಕ್ಕೆ ಇದು ಯೋಗ್ಯವಾದದ್ದು ಆಗಿದೆ. [14]ಆತನ ವಾಕ್ಯವನ್ನು ಬಳಸಿದ ಲೇಖಕರಲ್ಲಿ ಯೋಹಾನನು ಒಬ್ಬನೇ ಆಗಿದ್ದಾನೆ. ಆತನು ಅದನ್ನು ಯೋಹಾನ 14-16ರಲ್ಲಿ ಪರಿಶುದ್ದಾತ್ಮನನ್ನು ಸೂಚಿಸಲು ಬಳಸಿದ್ದಾನೆ (14:16, 26; 15:26; 16:7) ಮತ್ತು 1 ಯೋಹಾನ ಯೇಸುವನ್ನು ಸೂಚಿಸುವುದಾಗಿದೆ (1 ಯೋಹಾನ 2:1). [15]ಈ ಭಾಷಾಂತರಗಳು New

American Standard Bible, the New King James Version, the King James Version, the New International Version, the Revised Standard Version, and the New Revised Standard Version ಗಳಲ್ಲಿ ಬಳಸಲ್ಪಟ್ಟಿವೆ. [16]ಅವರು "ಪರಿಶುದ್ಧಾತ್ಮನಿಂದ ತುಂಬಿದ" ಯೇಸುವಿನ ಸನ್ನಿಧಾನದಲ್ಲಿದ್ದರು (ಲೂಕ 4:1), ಮತ್ತು ಆತನು ಆತ್ಮನು ಕೊಟ್ಟ ಶಕ್ತಿಯನ್ನು ಅವರೊಂದಿಗೆ ಹಂಚಿಕೊಂಡನು (ಮತ್ತಾಯ 10:8). [17]ಪರಿಶುದ್ಧಾತ್ಮನು ಪ್ರತಿಯೊಬ್ಬ ಕ್ರೈಸ್ತನಲ್ಲಿ ಇದ್ದಾನೆ (ಅಪೊಸ್ತಲರ ಕೃತ್ಯಗಳ 2:38; 2 ತಿಮೋಥೆ 1:14) ಆದರೆ ಅದೇ ರೀತಿಯಲ್ಲಿ ಆತನು ಅಪೋಸ್ತಲರೊಡನೆ ಇರುವಾಗ ಇರಲಿಲ್ಲ. ಅವರು ಆತ್ಮನ ಅದ್ಭುತೀಯ ತುಂಬುವಿಕೆಯನ್ನು ಪಡೆದರು (ಅಪೋಸ್ತಲರ ಕೃತ್ಯಗಳು 2:4; ನೋಡಿರಿ 5:12). [18]ಪರಿಶುದ್ಧಾತ್ಮನು "ತಿಳಿಯಲಾರದಷ್ಟು ಪ್ರಮಾಣದ" ವನಾಗಿದ್ದು ಆತನು ಬರುವುದರ ಉದ್ದೇಶವು ತನ್ನನ್ನು ತಾನು ಪ್ರಕಟಪಡಿಸುವುದು ಅಲ್ಲ ಎಂಬುದು ಒಂದು ಕಾರಣವಾಗಿದೆ. ಹೊಸಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನಿಗಾಗಿ ಅನೇಕ ಆಧಾರಗಳು ಇವೆ, ಆದರೆ ತಂದೆ ಮತ್ತು ಮಗನ ಬಗ್ಗೆ ನಾವು ಹೊಂದಿದಂತ ಸಂಪೂರ್ಣ ಪ್ರಕಟಿಸುವಿಕೆಯು ಇರುವಂತೆ ಆತನದಲ್ಲ. ಹೊಸಒಡಂಬಡಿಕೆಯು ಅತ್ಮನ ಬಗ್ಗೆ ಹೇಳು ವಂಥದ್ದು ಮೌಲ್ಯಾಧಾರಿತ ಅಧ್ಯಯನವಾಗಿದೆ, ಆದರೆ ಆತ್ಮನು ತಾನೇ ಇದನ್ನು ಇಡುವಲ್ಲಿ ಒತ್ತುಕೊಡುವಿಕೆಯನ್ನು ಇಡುವಾಗ ನಾವು ಜಾಗರೂಪಕರಾಗಿರ ಬೇಕು ತಂದೆ ಮತ್ತು ಮಗನ ಮೇಲೆ ಆತನನ್ನು (ಆತ್ಮನ) ಮತ್ತು ಆತನ ಕಾರ್ಯವನ್ನು ಉನ್ನತಗೆ ತರದಿರಿ. [19]Adapted from Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 362. [20]KJVಯಲ್ಲಿ ಯೋಹಾನ 16:13ರಲ್ಲಿ "ಆತನು ತನ್ನಷ್ಟಕ್ಕೆ ತಾನೇ ಮಾತನಾಡುವುದಿಲ್ಲ" ಎಂದಿದೆ. ಇದು ಆ ಸಂಗತಿಯಾಗಿಲ್ಲ, ಆತ್ಮನು ತನ್ನಷ್ಟಕ್ಕೆ ತಾನೇ ಏನನ್ನು ಹೇಳನು ಎಂಬ ಅಂಶವನ್ನು ಆ ಪದವು ತಿಳಿಸುವುದಾಗಿದೆ (19ನೇಯ ಅಡಿನುಡಿಯನ್ನು ನೋಡಿರಿ). "ಆತನ ತನ್ನಷ್ಟಕ್ಕೆ ತಾನೇ ಮಾತನಾಡದೇ ..." ಎಂಬುದು ಬಲು ಹೆಚ್ಚು ನಿಖರವಾಗಿ ವೇದಭಾಗದ ಅರ್ಥವನ್ನು ತಿಳಿಸುವುದಾಗಿದೆ.

[21]"ದೇವವಾಕ್ಯ" ಎಂಬುದು ಬರೆಯಲ್ಪಟ್ಟ ದೇವರ ವಾಕ್ಯವನ್ನು ಸೂಚಿಸುವುದಾಗಿದೆ (ನೋಡಿರಿ 2 ಪೇತ್ರ 3:15, 16). [22]ಈ ಆಧಾರಗಳನ್ನು ಕೊಡುವಾಗ ಯೇಸುವು ಮನದಲ್ಲಿ ಏನನ್ನು ಇಟ್ಟುಕೊಂಡಿದ್ದನು ಎಂದು ಹೇಳುವದು ಯಾವಾಗಲೂ ಸುಲಭವಾದದ್ದೇನಲ್ಲ. [23]ಈ ಪರಿಚ್ಛೇದದಲ್ಲಿ ಯೇಸು ಉದ್ದೇಶಪೂರ್ವಕವಾಗಿ ಅಸ್ಪಷ್ಟವಾಗಿದ್ದಾನೆ (ನೋಡಿ 16:25), ಆದರೆ ಆತನು ತನ್ನ ಪುನರುತ್ಥಾನದ ಕುರಿತು ಮತನಾಡಿದ್ದು "ಕೆಲಸಮಯದಲ್ಲಿಯೇ" ಎಂದು ಆತನು ಬಳಸಿದ ಪದಗಳು ಉತ್ತಮವಾಗಿ ಹೊಂದುವಂತೆ ಕಾಣುತ್ತದೆ (16:16-19). [24]ಯೋಹಾನ 15:1-8ರ ವಿಸ್ತೃತ ವ್ಯಾಖ್ಯಾನ ಮತ್ತು ಅನ್ವಯಕ್ಕಾಗಿ ಈ ಪುಸ್ತಕದಲ್ಲಿ ಸಿಕ್ಕುವ "ಕರ್ತನಿಗಾಗಿ ಫಲವನ್ನು ಕೊಡು" ಎಂಬ ಪ್ರಸಂಗವನ್ನು ನೋಡಿರಿ. [25]"ನಾನು ಆಗಿದ್ದೇನೆ" ಎಂಬುದು ಯೋಹಾನನ ಸುವಾರ್ತೆಯಲ್ಲಿನ ಏಳು ಹೇಳಿಕೆಗಳಲ್ಲಿ ಇದು ಕಡೆಯದ್ದಾಗಿದೆ. [26]NIVಯಲ್ಲಿ "ದೇವರಲ್ಲಿ ನಂಬಿಕೆಯಿಡಿರಿ; ನನ್ನನ್ನೂ ಸಹ ನಂಬಿರಿ." [27]ಯೋಹಾನ 14-17ರಲ್ಲಿನ ನಂಬಿಕೆಯ ಮೇಲಿನ ಇತರ ಪರಿಚ್ಛೇದಗಳಿಗಾಗಿ ನೋಡಿರಿ 16:30, 31; 7:8, 20, 21. [28]"ಸತ್ಯವನ್ನು ಸಹಿಸಿಕೋ" ಎಂಬುದಕ್ಕೆ ಸಂಬಂಧಿಸಿದ ಅರ್ಥಕ್ಕಾಗಿ ನಂತರದಲ್ಲಿ ಈ ಪುಸ್ತಕದಲ್ಲಿ ಸಿಕ್ಕುವ "ಕರ್ತನಿಗಾಗಿ ಫಲವನ್ನು ಕೊಡು" ಎಂಬ ಪ್ರಸಂಗವನ್ನು ನೋಡಿರಿ. [29]ಯೋಹಾನ 14-17ರಲ್ಲಿನ ಸತ್ಯಾಂಶದ ಮೇಲೆ ಒತ್ತಿ ಹೇಳಿದ ಹಾಗೆ ಯೇಸು ತಾನು ಈ ಜಗತ್ತಿಗೆ ಕಳುಹಿಸಲ್ಪಟ್ಟ ಹಾಗೆ ತನ್ನ ಅಪೊಸ್ತಲರನ್ನು ಈ ಜಗತ್ತಿಗೆ ಕಳುಹಿಸಿದ್ದನು (17:3, 8, 18, 21, 23) ಆದ್ದರಿಂದ ಅವರು ಆತನಿಗೆ ಸಂಬಂಧಿಸಿದಂತಹ ಸಾಕ್ಷಿಗಳಾಗಿಬೇಕಿತ್ತು (15:27). ನಾವು ನಮಗೋಸ್ಕರ ಆ ಅನ್ವಯವನ್ನು ಮಾಡಿಕೊಳ್ಳಬಹುದು ಯಾಕೆಂದರೆ ಅವರನ್ನು ಜಗತ್ತಿನೊಳಕ್ಕೆ ಕಳುಹಿಸಲ್ಪಟ್ಟ ನಿಯೋಗವು ಕೂಡಾ ನಮಗೆ ಅನ್ವಯಿಸುವುದಾಗಿದೆ (ನಂತರದಲ್ಲಿ ಈ ಸರಣಿಯಲ್ಲಿರುವ ಚರ್ಚೆಗಾಗಿ ನೋಡಿರಿ ಮತ್ತಾಯ 28:18-20). [30]ಯೇಸು ತನ್ನ ಜೀವಿತವನ್ನು ತನ್ನ ವೈರಿಗಳ ಮುಂದೆ ಇಟ್ಟಾಗಲೂ ಕೂಡಾ ಆತನ ಆತನ ಪ್ರೀತಿಯು ಈ ಶ್ರೇಣಿಯನ್ನು ಮೀರಿದ್ದಾಗಿರಬಹುದ (ರೋಮಾಪುರ 5:8-10).

[31]ಸೌಲ/ಪೌಲ ಇದಕ್ಕೆ ಒಂದು ಉದಾಹರಣೆಯಾಗಿದ್ದಾನೆ. ಆತನು ಕ್ರೈಸ್ತರನ್ನು ಹಿಂಸೆಪಡಿಸುತ್ತಿದ್ದಾಗ (ಅಪೊಸ್ತಲರ ಕೃತ್ಯಗಳು 8:1, 3; 9:1, 2), ಆತನು ದೇವರ ಚಿತ್ತವನ್ನು ಮಾಡುತ್ತಿದ್ದಾನೆ ಎಂದು ಯೋಚಿಸಿದ್ದನು (ಅಪೊಸ್ತಲರ ಕೃತ್ಯಗಳು 26:9; ಗಲಾತ್ಯ 1:13, 14). [32]ಇವು Jeremiah E. Rankin, "God Be with You," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994) ರಿಂದ ಹಾಡಲ್ಪಟ್ಟ ಹಾಡಿನ ಮೊದಲ ಪದಗಳು ಆಗಿವೆ. [33]Robert Duncan Culver, *The Life of Christ* (Grand Rapids, Mich.: Baker Book House, 1976), 237. [34]Wiersbe, 367.